# ಸರ್ಕಾರದ ಪ್ರಧಾನ ಕಾರ್ಯದರ್ಶಿ (ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಸಮ್ಮುಖದಲ್ಲಿ (ಮೇಲ್ಮನವಿ ಪಾಧಿಕಾರಿ- ಬೆಂಗಳೂರು. (ಮೇಲ್ಮನವಿ ಪ್ರಾಧಿಕಾರ- ಬೆಂಗಳೂರು)

**ಕಡತ ಸಂಖ್ಯೆ:ಆರ್‌ಡಿಪಿಆರ್ 249 ಜಿಪಿಎಸ್ 2020,**
**ದಿನಾಂಕ:16.02.2022.**

ಶ್ರೀ ಕಂಠಿ ವೀರೇಶ್, 35 ವರ್ಷ, ಮೇಲ್ಮನವಿದಾರರು
ಅಧ್ಯಕ್ಷರು,
ನಂದಿಹಳ್ಳಿ ಗ್ರಾಮ ಪಂಚಾಯಿತಿ,
ಹಡಗಲಿ ತಾಲ್ಲೂಕು,
ಬಳ್ಳಾರಿ ಜಿಲ್ಲೆ.

**ವಿರುದ್ಧ**

ಎದುರುದಾರರು

1. ಉಪ ನಿರ್ದೇಶಕರು ಮತ್ತು
   ಪದನಿಮಿತ್ತ ಕಾರ್ಯದರ್ಶಿ,
   ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.
2. ಜಿಲ್ಲಾಧಿಕಾರಿ,
   ಬಳ್ಳಾರಿ ಜಿಲ್ಲೆ
   ಬಳ್ಳಾರಿ.
3. ಮುಖ್ಯ ಕಾರ್ಯನಿರ್ವಾಹಣಾ ಅಧಿಕಾರಿ,
   ಜಿಲ್ಲಾ ಪಂಚಾಯಿತಿ ಬಳ್ಳಾರಿ,
   ಬಳ್ಳಾರಿ.
4. ತಾಲ್ಲೂಕು ಕಾರ್ಯನಿರ್ವಾಹಕ ಅಧಿಕಾರಿ,
   ಹೂವಿನಹಡಗಲಿ ತಾಲ್ಲೂಕು ಪಂಚಾಯಿತಿ,
   ಹೂವಿನಹಡಗಳಿ, ಬಳ್ಳಾರಿ ಜಿಲ್ಲೆ.
5. ಪಂಚಾಯಿತಿ ಅಭಿವೃದ್ಧಿ ಅಧಿಕಾರಿ,
   ನಂದಿಹಳ್ಳಿ ಗ್ರಾಮ ಪಂಚಾಯಿತಿ,
   ಹೂವಿನಹಡಗಲಿ ತಾಲ್ಲೂಕು,
   ಬಳ್ಳಾರಿ ಜಿಲ್ಲೆ.

**ಪ್ರಸ್ತಾವನೆ:**

ಶ್ರೀ ಕಂಠಿ ವೀರೇಶ್, ಅಧ್ಯಕ್ಷರು, ನಂದಿಹಳ್ಳಿ ಗ್ರಾಮ ಪಂಚಾಯಿತಿ, ಹಡಗಲಿ ತಾಲ್ಲೂಕು, ಬಳ್ಳಾರಿ ಜಿಲ್ಲೆ ಇವರು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ ಹಣ ಪಾವತಿ ಮಾಡುವ ವಿಚಾರದಲ್ಲಿ , ಮಾನ್ಯ ಉಚ್ಚ ನ್ಯಾಯಾಲಯದ ಆದೇಶದನ್ವಯ ಮರು ವಿಚಾರಣೆಯನ್ನು ಜರುಗಿಸಿ ಪ್ರಕರಣದಲ್ಲಿ ಇವರ ಮೇಲಿನ ಆರೋಗಳು ಸಾಭೀತಾಗಿರುವುದರಿಂದ ಆದೇಶ ಸಂಖ್ಯೆ:ಗ್ರಾಅಪ 869 ಗ್ರಾಪಂಅ 2017, ದಿನಾಂಕ:24.01.2020ರಲ್ಲಿ ಗ್ರಾಮ ಪಂಚಾಯಿತಿ ಅಧ್ಯಕ್ಷ ಸ್ಥಾನ ಹಾಗೂ ಸದಸ್ಯತ್ವ ಸ್ಥಾನದಿಂದ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ ಪ್ರಕರಣ 48(4) ಮತ್ತು 48(5)ರನ್ವಯ ತೆಗೆದು ಹಾಕಿ ಸರ್ಕಾರವು ಆದೇಶಿಲಾಗಿತ್ತು.

ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ 869 ಗ್ರಾಪಂಅ 2017, ದಿನಾಂಕ:24.01.2020ರ ಆದೇಶವನ್ನು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ಧಾರವಾಡದಲ್ಲಿ ಪ್ರಶ್ನಿಸಿ ರಿಟ್ ಅರ್ಜಿ ಸಂಖ್ಯೆ:137136/2020 (LB-RES) ದಿನಾಂಕ:24.08.2021ಅನ್ನು ದಾಖಲಿಸಿದ್ದು, ಆದೇಶದಲ್ಲಿ ಸದರಿ ರಿಟ್ ಅರ್ಜಿ ಕುರಿತು ಮಾನ್ಯ ನ್ಯಾಯಾಲಯವು ದಿನಾಂಕ:24.08.2021 ರಂದು ನೀಡಿದ ಆದೇಶದಲ್ಲಿ ಮಾನ್ಯ ರಾಜ್ಯ ಉಚ್ಚ ನ್ಯಾಯಾಲಯದ ಆದೇಶದಂತೆ ವಜಾಗೊಂಡಿದ್ದ ಅಂದಿನ ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿದ್ದ ಶ್ರೀ ಕಂಠಿ ವಿರೇಶ್ ರವರನ್ನು ಅಧ್ಯಕ್ಷ ಹುದ್ದೆಯಿಂದ ತೆಗೆದುಹಾಕುವ ಮುನ್ನ ನೀಡಿದ್ದ ಕಾರಣ ಕೇಳುವ ನೋಟೀಸಿಗೆ ಅವರು ಸಲ್ಲಿಸಿದ ವಿವರಣೆಯನ್ನು ಮತ್ತೊಮ್ಮೆ ಸೂಕ್ತವಾಗಿ ಪರಿಶೀಲನೆ ಮಾಡಿ ಅವರಿಂದ ಹೇಳಿಕೆಯನ್ನು ಪಡೆದು ತದನಂತರ ಸರ್ಕಾರವು ಅವರ ಸದಸ್ಯತ್ವ ಮತ್ತು ಅಧ್ಯಕ್ಷ ಸ್ಥಾನದಿಂದ ವಜಾಗೊಳಿಸುವ ಬಗ್ಗೆ ಸ್ಪಷ್ಟ ಮತ್ತು ಸೂಕ್ತ ನಿರ್ಧಾರ ಕೈಗೊಳ್ಳುಬೇಕಾಗಿರುತ್ತದೆಂದು ಆದೇಶಿಸಲಾಗಿರುತ್ತ.

ಮಾನ್ಯ ನ್ಯಾಯಾಲಯದ ಆದೇಶದಂತೆ ಪ್ರಧಾನ ಕಾರ್ಯದರ್ಶಿ (ಪಂ.ರಾಜ್), ಗ್ರಾಮೀಣಾಭಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರ ಅರೆ ನ್ಯಾಯಿಕ ನ್ಯಾಯಾಲಯದಲ್ಲಿ ವಿಚಾರಣೆಗೆ ಹಾಜರಾ ತಿಳುವಳಿಕೆ ಪತ್ರ ಜಾರಿ ಮಾಡಿದ್ದು, ಪ್ರಧಾನ ಕಾರ್ಯದರ್ಶಿ (ಪಂ.ರಾಜ್), ಗ್ರಾಮೀಣಾಭಿವೃದ್ಧಿ ಪ ಪಂಚಾಯತ್ ರಾಜ್ ಇಲಾಖೆ ರವರ ಅರೆ ನ್ಯಾಯಿಕ ನ್ಯಾಯಾಲಯದಲ್ಲಿ ದಿನಾಂಕ:05.01.2022 ರ ನಡೆದ ವಿಚಾರಣೆಯಲ್ಲಿ ಶ್ರೀ ಕಂಠಿ ವೀರೇಶ್, ಮಾಜಿ ಅಧ್ಯಕ್ಷರು ಹಾಲಿ ಸದಸ್ಯರು ನಂದಿಹಳ್ಳಿ ಗ ಪಂಚಾಯಿತಿ ಇವರು ಲಿಖಿತ ಸಮಜಾಯಿಷಿ ಸಲ್ಲಿಸಿದ್ದು ವಿವರ ಈ ಕೆಳಗಿನಂತೆ ಇರುತ್ತದೆ.

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ 2015-1 ಸಾಲಿನ ಕಾಮಗಾರಿಗಳಲ್ಲಿ ಹುಗಲೂರು ತಾಂಡ ಗ್ರಾಮದ ಹೊನ್ನನಾಯ್ಕನ ಮನೆಯ ಮುಂದು ತಗ್ಗು ಮ ಸಮತಟ್ಟು ಮಾಡುವ ಕಾಮಗಾರಿಗಳಲ್ಲಿ ಮಸ್ಟರ್ ರೂ.ಸಂಖ್ಯೆ:5922ರಲ್ಲಿ ದಿನಾಂಕ:30.12.2015 ರಿ 14.01.2016ರವರೆಗೆ ಎನ್.ಅರ್. ಎಂ. ತೆಗೆದು ಸದರಿ ಎನ್.ಎಂ.ಆರ್. ನಂತೆ ಕಾರ್ಯ ನಿರ್ವಹಿಸಿದ 6 ಜ ಕೂಲಿ ಪಾವತಿಸಿದ್ದು, ಈ ಪೈಕಿ ದಿನಾಂಕ:15.12.2011 ರಂದು ಮರಣ ಹೊಂದಿರುವ ಶ್ರೀಮತಿ ಜಿ.ಹಾಲ ಇವರ ಖಾತೆಗೆ ರೂ.1,344/-ಗಳನ್ನು ದಿನಾಂಕ:06.07.2016 ರಂದು ಜಮೆ ಮಾಡಿರುತ್ತಾರೆ.

ಶ್ರೀಮತಿ ಜಿ. ಹಾಲಮ್ಮ ನವರು ಮರಣ ಹೊಂದಿದ್ದರೂ ಉದ್ಯೋಗ ಖಾತ್ರಿಯಲ್ಲಿ ಜಾಬ್ ಕಾ ನಿಂದ ತೆಗೆದು ಹಾಕಲು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗೆ ತಿಳಿಸಿದ್ದರೂ ತೆಗೆದು ಹಾಕದೇ ಮ ಹೊಂದಿದ್ದವರ ಹೆಸರಿನಲ್ಲಿರುವ ಖಾತೆಗೆ ಜಮೆಯಾಗಿರುವ ಬಗ್ಗೆ ಮನವರಿಕೆಯಾದ ನಂತರ ಆ ಖಾತೆಯಿ ಹಣವನ್ನು ದಿನಾಂಕ:05.08.2016 ರಂದು ವಾಪಸ್ಸು ಗ್ರಾಮ ಪಂಚಾಯಿತಿಯ ಎಂ.ಜಿ.ಎನ್.ಆರ್.ಜಿ.ಎ. ಸಂಖ್ಯೆ:10820100006393ಗೆ ವಾಪಸ್ಸು ಪಡೆಯಲಾಗಿದೆ ಎಂದು ತಿಳಿಸಿ ಸಂಬಂಧಿಸಿದ ಪ್ರ ದಾಖಲೆಗಳನ್ನು ಒದಗಿಸಿರುತ್ತಾರೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಯಾರ ಎಫ್.ಡಿ.ಓ. ಮುಖಾಂತರ ಕ ಕಾರ್ಮಿಕರ ಖಾತೆಗೆ ಹಣ ಜಮಾ ಆಗಿರುತ್ತದೆ ಅದರ ಬಗ್ಗೆ ದೃಢೀಕರಣ ನೀಡುವ ಕು ದಿನಾಂಕ:18.03.2021 ರಂದು ತಾಲ್ಲೂಕು ಪಂಚಾಯತಿ ಹಡಗಲಿ ಇವರಿಗೆ ಮನವಿ ಪತ್ರ ಸಲ್ಲಿಸಿರುತ್ತೇನೆ ಪ ದನದ ದೊಡ್ಡಿ ಕಾಮಗಾರಿಯು ಸಾರ್ವಜನಿಕರ ವೈಯಕ್ತಿಕ ಕಾಮಗಾರಿ ಆಗಿದ್ದು, ಸಂಬಂಧ ಫಲಾನುಭವಿಗಳ ಜಾಬ್ ಕಾರ್ಡ್ ಹಾಗೂ ಅವರ ಖಾತೆಗೆ (ಎನ್.ಎಂ.ಆರ್.) ಹಣ ಮಾತ್ರ ಜಮಾ ಆಗಿರು ಬಿ.ಒ.ಸಿ. ಮೊತ್ತವು ಯಾವುದೇ ಫಲಾನುಭವಿಗಳಿಗೆ ಹಾಕಿರುವುದಿಲ್ಲ, ಕಾಮಗಾರಿಯ ಹಂತವಾರು ಪರಿಶಿ ಟಿ.ಎ. ರವರು ಎಂ.ಬಿ. ನಮೂದಿಸಿ, ಜೆ.ಇ. ಮತ್ತು ಪಿಡಿಓ ರವರು ಎಂ.ಎಸ್. ಮಾಡಿರುತ್ತಾರೆ. ಈ ಪ್ರಕರಣ ನನ್ನದು ಯಾವುದೇ ರೀತಿಯ ಸಾರ್ವಜನಿಕರಿಗೆ ಮತ್ತು ಸರ್ಕಾರಕ್ಕೆ ಯಾವುದೇ ಹಣ ದುಬ ಆಗಿರುವುದಿಲ್ಲ. ಟಿಸಿ ರವರು ಮತ್ತು ಸಹಾಯಕ ನಿರ್ದೇಶಕರು ತಾಂತ್ರಿಕ ಸಹಾಯಕರು, ಪಿಡಿ.ಓ ನಿರ್ಲಕ್ಷ್ಯತನದಿಂದ ಈ ರೀತಿ ಆಗಿರುತ್ತದೆಂದು ಈ ಪ್ರಕರಣದಿಂದ ನನ್ನನ್ನು ದೋಷಮುಕ್ತಗೊಳಿಸಬೇಕೆ ಕೋರಿರುತ್ತಾರೆ.

ಶ್ರೀ ಕಂಠಿ ವೀರೇಶ್, ಅಧ್ಯಕ್ಷರು, ನಂದಿಹಳ್ಳಿ, ಗ್ರಾಮ ಪಂಚಾಯಿತಿ, ಹಡಗಲಿ ತಾಲ್ಲೂಕು, ಬಳ್ಳಾರಿ ಇವರು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ ಹಣ ಪಾ ಮಾಡುವ ವಿಚಾರದಲ್ಲಿ, ಇವರ ಮೇಲಿನ ಆರೋಗಳು ಸಾಬೀತಾಗಿರುವುದರಿಂದ ಸದರಿಯವರ ವಿ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ ಪ್ರಕರಣ 48(4) ಮತ್ತು ತೆಗೆದು ತೆಗೆದುಹಾಕಿ ಸರ್ಕಾರ ಆದೇಶಿಸಿರುವುದು ಸರಿಯಾಗಿರುತ್ತದೆ. ಅದ್ದರಿಂದ, ಈ ಕೆಳಕಂಡ ಆದೇಶ.

## ಆದೇಶ

ಶ್ರೀ ಕಂಠಿ ವೀರೇಶ್, ಅಧ್ಯಕ್ಷರು, ನಂದಿಹಳ್ಳಿ, ಗ್ರಾಮ ಪಂಚಾಯಿತಿ, ಹಡಗಲಿ ತಾಲ್ಲೂಕು, ಬಳ್ಳಾರಿ ಇವರು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ ಹಣ ಪ ಮಾಡುವ ವಿಚಾರದಲ್ಲಿ, ಇವರ ಮೇಲಿನ ಆರೋಗಳು ಸಾಬೀತಾಗಿರುವುದರಿಂದ ಸದರಿಯವರ ವಿರು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯ, 1993ರ ಪ್ರಕರಣ 48(4) ಮತ್ತು ರನ್ವಯ ಸರ್ಕಾರ ಅನರ್ಹಗೊಳಿಸಿ, ಆದೇಶಿಸಿದೆ.

ಈ ಆದೇಶವನ್ನು ತೆರೆದ ನ್ಯಾಯಾಲಯದಲ್ಲಿ ಘೋಷಿಸಿರುತ್ತೇನೆ.

**(ಉಮಾ ಮಹಾದೇವನ್)**
ಸರ್ಕಾರದ ಪ್ರಧಾನ ಕಾರ್ಯದರ್ಶಿ (ಪಂ.ರಾಜ್)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾ